## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ.ರವರ ನ್ಯಾಯಾಲಯ, ತಿಪಟೂರು.

## ಸಿ.ಸಿ.ನಂ. 909/2018

| ಪಿರ್ಯಾದುದಾರರು : | ವಿರುದ್ಧ | ಆರೋಪಿ : |
|---|---|---|
| ವೈ.ಎಲ್.ಲಿಂಗ ರೆಡ್ಡಿ | | ಹೆಚ್. ಶಹನಾಜ್ |

**-: ದಂಡ ಪ್ರಕ್ರಿಯಾ ಸಂಹಿತೆ ಕಲಂ. 313 ಅಡಿಯಲ್ಲಿ ಆರೋಪಿಯ ಹೇಳಿಕೆ:-**

ಪ್ರಶ್ನೆ:1) ಇದುವರೆವಿಗೂ ಪಿರ್ಯಾದುದಾರರ ಪರ ಸಾಕ್ಷ್ಯನುಡಿದ ಎಲ್ಲಾ ಸಾಕ್ಷೀದಾರರ ಹೇಳಿಕೆಗಳನ್ನು ಆಲಿಸಿದ್ದೀರಾ?

ಉತ್ತರ:-

ಪ್ರಶ್ನೆ:2) ಫ್ರಾ.ಸಾ-1 ವೈ.ಎಲ್.ಲಿಂಗ ರೆಡ್ಡಿ ರವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 27.06.2018 ರಂದು ಆರೋಪಿಯಾದ ನೀವು ಅವರಿಂದ ರೂ.3,50,000/- ಹಣವನ್ನು ಸಾಲವಾಗಿ ಪಡೆದಿದ್ದು, ಸದರಿ ಸಾಲದ ತೀರುವಳಿ ಸಲುವಾಗಿ ಅವರಿಗೆ ಚಿಕ್ಕಮಗಳೂರು ಶಾಖೆಯ ಸಿಂಡಿಕೇಟ್ ಬ್ಯಾಂಕಿನ ದಿಃ 27.08.2018 ರ ಚೆಕ್ ನಂ.289881 ನ್ನು ಸಹಿ ಮಾಡಿ ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:-

ಪ್ರಶ್ನೆ:3) ಫ್ರಾ.ಸಾ-1 ರವರು ಮುಂದುವರೆದು ನಂತರ ಅವರು ಸದರಿ ಚೆಕ್ ನ್ನು ತಿಪಟೂರು ಶಾಖೆಯ ಎಸ್.ಬಿ.ಐ.ಬ್ಯಾಂಕಿಗೆ ನಗದೀಕರಣಕ್ಕಾಗಿ ಹಾಜರ್ ಪಡಿಸಿದಾಗ ಸದರಿ ಬ್ಯಾಂಕಿನವರು ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಲಭ್ಯವಿಲ್ಲ (Funds insufficient ) ಎಂದು ತಿಳಿಸಿ, ಹಿಂಬರಹದೊಂದಿಗೆ ಸದರಿ ಚೆಕ್ ನ್ನು ಹಿಂದಿರುಗಿಸಿದ್ದು, ನಂತರ ಫ್ರಾ.ಸಾ-1 ರವರು ಆರೋಪಿಯಾದ ನಿಮಗೆ ಸಾಲದ ಹಣ ಮರುಪಾವತಿ ಮಾಡುವಂತೆ ತಿಳಿಸಿ ವಕೀಲರ ಮೂಲಕ ದಿಃ 29.08.2018 ರಂದು ನೋಟೀಸ್ ಕಳುಹಿಸಿದ್ದು, ಸದರಿ ನೋಟೀಸ್ ನಿಮಗೆ ಜಾರಿಯಾಗಿದ್ದು, ನೋಟೀಸ್ ಕಳುಹಿಸಿದ 15 ದಿನಗಳ ನಂತರವೂ ಸಹ ಆರೋಪಿಯಾದ ನೀವು ಪಿರ್ಯಾದುದಾರರಿಗೆ ಸಾಲದ ಹಣವನ್ನು ಮರು ಪಾವತಿಸಿರುವುದಿಲ್ಲ ಹಾಗೂ ಅವರಿಗೆ ಮೋಸ ಮಾಡುವ ಸಲುವಾಗಿ ನೀವು ಸದರಿ ಚೆಕ್ ನ್ನು ವಿತರಿಸಿರುತ್ತೀರೆಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವೇನು ಹೇಳುವಿರಿ?

ಉತ್ತರ:-

ಪ್ರಶ್ನೆ:4) ಈ ಪ್ರಕರಣದಲ್ಲಿ ನಿಮ್ಮ ಪರವಾಗಿ ಸಾಕ್ಷ್ಯವಿಚಾರಣೆ / ದಾಖಲಾತಿ ಹಾಜರು ಪಡಿಸುವಿರಾ?

ಉತ್ತರಃ-

ಪ್ರಶ್ನೆ5)ಈ ಪ್ರಕರಣದಲ್ಲಿ ನೀವೇನಾದರೂ ಹೇಳ ಬಯಸುವಿರಾ?

ಉತ್ತರಃ-

(ದಿನಾಂಕ: **22.02.2021** ರಂದು ತೆರೆದ ನ್ಯಾಯಾಲಯದಲ್ಲಿ ಮೇಲಿನ ಪ್ರಶ್ನೆಗಳನ್ನು ಆರೋಪಿಗೆ ಓದಿ ಹೇಳಲಾಗಿ, ಅವರು ನೀಡಿದ ಉತ್ತರಗಳನ್ನು ಪಡೆದು ಯಥಾವತ್ತಾಗಿ ನನ್ನಿಂದ ದಾಖಲು ಮಾಡಿಕೊಳ್ಳಲಾಯಿತು)

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದಂ.ನ್ಯಾದಂ.,
ತಿಪಟೂರು